**Praja Vani (Kannada Daily)**

Date: March 23, 2013 Page No.3

Edition: Mysore Language: Kannada

# ‘ಸಾಮಾಜಿಕ ಸಮಸ್ಯೆಗಳಿಗೆ ಸಮಾನತೆ ಪರಿಹಾರ’

ಮೈಸೂರು: ದೇಶವನ್ನು ಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳಿಗೆ ಸಮಾನತೆ ಪರಿಹಾರ ನೀಡಬಲ್ಲದು ಎಂದು ಟಾಟಾ ಸ್ಟೀಲ್ ಲಿಮಿಟೆಡ್ ಉಪಾಧ್ಯಕ್ಷ ಡಾ.ಬಿ.ಮುತ್ತುರಾಮನ್ ಅಭಿಪ್ರಾಯಪಟ್ಟರು.

ನಗರದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ)ನಲ್ಲಿ ಶುಕ್ರವಾರ ನಡೆದ 18ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ಸಾಮಾಜಿಕ ವ್ಯವಸ್ಥೆ, ಜಾತಿಯ ಕಾರಣಗಳಿಂದಾಗಿ ಸಮಾನತೆ ಕನಸಾಗಿದ್ದು, ಅಸಮಾನತೆಯು ಶತಮಾನಗಳಿಂದ ಸಮಸ್ಯೆಯಾಗಿ ಕಾಡುತ್ತಿದೆ. ಕೈಗಾರಿಕೆ, ಕಾರ್ಪೊರೇಟ್ ವಲಯಗಳಲ್ಲಿ ಕಂದಕಗಳು ನಿರ್ಮಿಸುತ್ತಿದೆ. ಹೀಗಾಗಿ ಉದ್ಯೋಗದಲ್ಲಿ ಪ್ರತಿಭೆಯನ್ನು ಮಾತ್ರ ಮಾನದಂಡವನ್ನಾಗಿ ಪರಿಗಣಿಸುವುದು ಸರಿ ಯಲ್ಲ. ಸಾಮಾಜಿಕ ಅಸಮಾನತೆಯ ಸಮಸ್ಯೆ ಯನ್ನು ಪರಿಹರಿಸಲು ಪ್ರಯತ್ನಿಸದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.




ಮೈಸೂರಿನ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನಲ್ಲಿ ಶುಕ್ರವಾರ ನಡೆದ 18ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾದ ಐ.ಝುಟಕಿಯಾ ಜಯಕುಮಾರ್, ನತಂಶ್ ಶರ್ಮ, ಪ್ರಿಯಾ ಬಾತ್ರಾ, ಎಸ್.ಕೆ.ಪದ್ಮಿನಿ, ಎಸ್. ಅರುಣ್ ಶಾನ್ ಅವರೊಂದಿಗೆ ಡಾ.ಸುರೇಂದ್ರ ಕುಮಾರ್, ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್.ಪರುಶುರಾಮನ್, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ, ಟಾಟಾ ಸ್ಟೀಲ್ ಲಿಮಿಟೆಡ್ ಉಪಾಧ್ಯಕ್ಷ ಡಾ.ಬಿ.ಮುತ್ತುರಾಮನ್ ಇದ್ದಾರೆ.

ಭ್ರಷ್ಟಾಚಾರ, ಮೂಲ ಸೌಲಭ್ಯಗಳ ಕೊರತೆ ಭಾರತಕ್ಕೆ ಸವಾಲಾಗಿ ಪರಿಣಮಿಸಿವೆ. ಸರ್ಕಾರ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದರೆ ಭಾರತ ವಿಶ್ವದ ಬಲಿಷ್ಠ ರಾಷ್ಟ್ರವಾಗಿ ನಿರ್ಮಾಣ ವಾಗುತ್ತದೆ. ಅರ್ಥಿಕವಾಗಿಯೂ ಸಬಲವಾಗಲಿದ್ದು, ಯುವ ಸಮೂಹಕ್ಕೆ ಅವಕಾಶಗಳ ಹೆಬ್ಬಾಗಿಲು ತೆರೆಯಲಿದೆ. ಆದ್ದರಿಂದ ವಿದೇಶದಲ್ಲಿ ಕೆಲಸ ಅರಸುವುದಕ್ಕಿಂತ ಭಾರತಕ್ಕೆ ಆದ್ಯತೆ ನೀಡಿ ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ವ್ಯವಹಾರ ನಿರ್ವಹಣಾಶಾಸ್ತ್ರ ಶಿಕ್ಷಣ ಪಡೆದ 167 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಿದರು. ನತಂಶ್ ಶರ್ಮ ಎರಡು ಚಿನ್ನದ ಪದಕ, ಎಸ್. ಅರುಣ್ ಶಾನ್, ಪ್ರಿಯಾ ಬಾತ್ರಾ, ನೇಹಾ ಮಹೇಶ್ವರಿ, ಎಸ್.ಕೆ.ಪದ್ಮಿನಿ, ಐ.ಝುಟಕಿಯಾ ಜಯಕುಮಾರ್ ಅವರಿಗೆ ತಲಾ ಒಂದು ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ನಿರ್ದೇಶಕ ಡಾ.ಎನ್.ಆರ್.ಪರುಶು ರಾಮನ್, ಉಪ ನಿರ್ದೇಶಕಿ ಡಾ.ಎಚ್.ಗಾಯತ್ರಿ, ಪಿಜಿಡಿಎಂ ವಿಭಾಗದ ಮುಖ್ಯಸ್ಥರಾದ ಡಾ.ನೀತು ಗಣಪತಿ, ಪ್ರೊ.ಎಸ್. ಪ್ರಭಾಕರ್, ಡಾ.ಪ್ರಸನ್ನಚಂದ್ರ, ಡಾ.ಸುರೇಂದ್ರ ಕುಮಾರ್, ಡಾ.ಎ.ಎಚ್.ಕಾರ್ಲೋ ಇದ್ದರು.